ಶ್ರೀ ಎ.ವಿ. ನರಸಿಂಹರೆಡ್ಡಿ.—ಈ ಸೆಂಟ್ರಲ್ ಟೆಕ್ನಿಕಲ್ ಎಜುಕೇಷನ್ ಕಮಿಟಿಯವರು ಬೆಂಗಳೂರು ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿಗೆ ಸೇರಿಸಿಕೊಳ್ಳುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಮಾತ್ರ ಕಡಮೆ ಮಾಡುವುದಕ್ಕೆ ಕಾರಣವೇನು ?

ಶ್ರೀ ಎ. ಜಿ. ರಾಮಚಂದ್ರರಾವ್.—ಎಲ್ಲಾ ಟೆಕ್ನಿಕಲ್ ಕಾಲೇಜುಗಳಲ್ಲಿಯೂ ಒಂದು ಸರಿಯಾದ ಸ್ಟ್ಯಾಂಡರ್ಡ್ ಇರಬೇಕೆಂದು ಇದನ್ನು ಗೊತ್ತು ಮಾಡಲು ಒಂದು ಸಮಿತಿಯನ್ನು ಏರ್ಪಡಿಸಿದರು. ಅವರು ಎಲ್ಲ ಕಾಲೇಜುಗಳಿಗೂ ಹೋಗಿ ಪರಿಶೀಲನೆ ಮಾಡಿ, ಈಗಿರತಕ್ಕ ವಿದ್ಯಾರ್ಥಿಗಳಿಗೆ ಸಲಕರಣೆ ಸಾಲದು, ಇದನ್ನು ನಿರ್ಬಂಧನಬೇಕೆಂದು ಅಭಿಪ್ರಾಯ ಪಟ್ಟರು. ಈಗಿರತಕ್ಕ ಪರಿಸ್ಥಿತಿಯಲ್ಲಿ ಆ ಇಂಜಿನಿಯರಿಂಗ್ ಕಾಲೇಜಿನಲ್ಲಿ 120 ಹುಡುಗರಿಗೆ ಮಾತ್ರ ಶಿಕ್ಷಣ ಕೊಡಲು ಸಾಧ್ಯವಾಗುತ್ತದೆಂದು ಶಿಫಾರಸು ಮಾಡಿದರು. ಇದೇ ಕಾರಣ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಆ ಕಾಲೇಜಿಗೆ ಹಿಂದೆ 200 ಮಂದಿಯನ್ನು ಸೇರಿಸುತ್ತಿದ್ದರು, ಈಗ ಅಷ್ಟಕ್ಕಾಗದರೂ equip ಮಾಡುವುದು ಅವಶ್ಯಕವಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವಶ್ಯಕತೆಯ ವಿಷಯಕ್ಕೆ ಹೋದರೆ, ನಾನಾಗಲೇ ಹೇಳಿದಹಾಗೆ, ಇತರ ಸಂಸ್ಥಾನಗಳಿಗಿಂತ ನಮ್ಮ ಸಂಸ್ಥಾನದಲ್ಲಿ ಹೆಚ್ಚು ಕಾಲೇಜುಗಳಿವೆ ಮತ್ತು ವಿದ್ಯಾರ್ಥಿಗಳೂ ಇದ್ದಾರೆ. ಒಟ್ಟು ಇಂಡಿಯಾ ದೇಶವನ್ನು ನೋಡಿಕೊಂಡು ಮಾಡಬೇಕೇ ಹೊರತು, ನಾವೇ ಬೇರೆಯಾಗಿ ಮಾಡಿದರೆ, ಶಿಕ್ಷಣ ಪಡೆದು ಇಲ್ಲಿಯವರು ಅಲ್ಲಿಯೂ ಹೋಗಿ, ನಿರುದ್ಯೋಗ ಅಲ್ಲಿಯೂ ಹೆಚ್ಚಬಹುದು. ಅಂಥ ಪರಿಸ್ಥಿತಿಯನ್ನು ತರುವುದು ನೂಕ್ತವಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈಚೆಗೆ ಪಂಡಿತ್ ನೆಹರೂ ಅವರು ವಿದ್ಯಾಭ್ಯಾಸದ ವಿಚಾರವನ್ನು ಪ್ರಸ್ತಾಪ ಮಾಡುತ್ತಾ ಟೆಕ್ನಿಕಲ್ ಟ್ರೈನಿಂಗಿಗೆ ಗಮನ ಕೊಡಬೇಕೇ ಹೊರತು ಬೇರೆ ಜನರಲ್ ವಿದ್ಯಾಭ್ಯಾಸವನ್ನು ಆದಷ್ಟು ಕಡಮೆ ಮಾಡಬೇಕೆಂದು ಹೇಳಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಾಕಿ ಜನರಲ್ ವಿದ್ಯಾಭ್ಯಾಸವನ್ನು ಕಡಮೆ ಮಾಡಬೇಕೆಂದು ಹೇಳಿದುದು ನನ್ನ ಗಮನಕ್ಕೆ ಬಂದಿಲ್ಲ; ಟೆಕ್ನಿಕಲ್ ಶಿಕ್ಷಣವನ್ನು ಹೆಚ್ಚಿಸಬೇಕೆಂದು ಹೇಳಿರುವುದು ಗೊತ್ತಿದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಮೈಸೂರು ದೇಶದಲ್ಲಿ ಟೆಕ್ನಿಕಲ್ ಶಿಕ್ಷಣ ಪಡೆದು ವಿದ್ಯಾರ್ಥಿಗಳು ಬೇರೆ ದೇಶಗಳಿಗೆ ಉದ್ಯೋಗಗಳಿಗೆ ಹೋಗಿ ನಿರುದ್ಯೋಗ ಹೆಚ್ಚುತ್ತದೆ ಯೆಂದು ಹೇಳಿದಿರಿ. ನಿರುದ್ಯೋಗ ಸಮಸ್ಯೆ ವಿದ್ಯಾವಂತರಲ್ಲದೆಯೇ ಹೊರತು ಟೆಕ್ನಿಕಲ್ ಶಿಕ್ಷಣ ಪಡೆದವರಲ್ಲಲ್ಲ, ದೇಶಕ್ಕೆ ಇಂಥವರ ಆವಶ್ಯಕತೆ ಇದೆ ಎಂಬುದು ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಟೆಕ್ನಿಕಲ್ ವಿದ್ಯಾಭ್ಯಾಸ ಪಡೆದವರಲ್ಲಿ ನಿರುದ್ಯೋಗವಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ ವೆಂಬುದನ್ನು ಒಪ್ಪುತ್ತೇನೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಆದುದರಿಂದ ನಮ್ಮ ಸಂಸ್ಥಾನದಲ್ಲಿ ಟೆಕ್ನಿಕಲ್ ಶಿಕ್ಷಣ ಪಡೆಯಬೇಕೆಂಬ ಇಚ್ಛೆಯಿಂದ ಇಂಥ ವಿದ್ಯಾಸಂಸ್ಥೆಗಳಿಗೆ ಪ್ರವೇಶ ಕೇಳುತ್ತಿರುವವರಿಗೆ ಇನ್ನೂ ಹೆಚ್ಚು ಅನುಕೂಲ ಮಾಡಿಕೊಡುವುದು ಸರ್ಕಾರದ ಕರ್ತವ್ಯವಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸಾಧ್ಯವಾದಷ್ಟು ಮಾಡುತ್ತೇವೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಖಾಸಗಿಯವರು ಮೆಡಿಕಲ್ ಕಾಲೇಜನ್ನು ಪ್ರಾರಂಭಮಾಡಿರುವ ರೀತಿಯಲ್ಲಿ ಇಂಜಿನಿಯರಿಂಗ್ ಕಾಲೇಜನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಪಟ್ಟರೆ ಅವರಿಗೆ ಸಹಾಯ ಮಾಡುತ್ತೀರಾ ?

Mr. SPEAKER.—It is a hypothetical question.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಬೆಂಗಳೂರಿನಲ್ಲಿ ಬಿ.ಎಂ.ಎಸ್. ಕಾಲೇಜಿನಲ್ಲಿ ಸೀಟುಗಳ ಸಂಖ್ಯೆಯನ್ನು ಕಡಮೆಮಾಡದೆ ಸರ್ಕಾರಿ ಕಾಲೇಜಿನಲ್ಲೆ ಮಾತ್ರ ಮಾಡಲು ಕಾರಣವೇನು ?

ಶ್ರೀ ಎ. ಜಿ. ರಾಮಚಂದ್ರರಾವ್.—ಸಮಿತಿಯ ಶಿಫಾರಸು ತಡವಾಗಿ ಬಂದದ್ದೇ ಕಾರಣ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಬಿ.ಎಂ.ಎಸ್. ಕಾಲೇಜಿನಲ್ಲಿ ಸಲಕರಣೆಗಳು ಸರಿಯಾಗಿವೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಲ್ಲಿಯೂ ವಿದ್ಯಾರ್ಥಿಗಳ ಸಂಖ್ಯೆಯನ್ನು ಕಡಮೆ ಮಾಡಬೇಕೆಂದು ಶಿಫಾರಸು ಮಾಡಿದ್ದಾರೆ. ಆದರೆ ಅವರ ಶಿಫಾರಸು ತಡವಾಗಿ ಬಂದದ್ದರಿಂದ ಮಾಡಲಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಷೆಡ್ಯೂಲ್ಡ್ ಕ್ಯಾಸ್ಟ್ಸ್ ಅಂಡ್ ಟ್ರೈಬ್ಸಿನ ವಿದ್ಯಾರ್ಥಿಗಳು ಕೆಲವರಿಗೆ ಇಂಜಿನಿಯರಿಂಗ್ ಕಾಲೇಜಿನಲ್ಲಿ ಸೀಟುಗಳು ಸಿಕ್ಕಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವರಿಗೆ ಮೊದಲು ಗಮನ ಕೊಡಬೇಕೆಂದು ಅಡ್ಮಿಷನ್ ಸಮಿತಿಗೆ ಹೇಳಿದ್ದೇವೆ.

Munsiff's Court and Magistrate's Court in Arsikere (Opening.)

Q.—91. Sri B. CHIKKANNA (Javagal).—

Will the Government be pleased to state :—

(*a*) whether they have decided to open a Munsiff's Court and a First Class Magistrate's Court in Arsikere ;

(*b*) the number of cases pertaining to Arsikere Taluk that are filed in the Munsiff's and Magistrate's Courts at Hassan each year ;

(*c*) the suggestions made by Sri Mallappa Committee in respect of granting a court to Arsikere ?

A.—Sri A. G. RAMACHANDRA RAO (Minister for Law and Education).—

(*a*)—No.

(*b*) On an average, Arsikere Taluk is contributing 300 Original Suits, 60 Small Cause Suits and 620 Criminal Cases, approximately per year to the work of the Munsiff and Magistrates' Courts at Hassan, respectively.

(*c*) The Committee has suggested that a Munsiff and First Class Magistrate's Court exercising jurisdiction over the Arsikere Taluk, may be established at Arsikere.

ಶ್ರೀ ಬಿ. ಚಿಕ್ಕಣ್ಣ.—ಸರ್ಕಾರದವರು ಯಾವ ಆಧಾರದ ಮೇಲೆ ಹೊಸ ತಾಲ್ಲೂಕುಗಳಲ್ಲಿ ಕೋರ್ಟುಗಳನ್ನು ಕೊಡಬೇಕೆಂದು ಗೊತ್ತುಮಾಡಿದ್ದಾರೆ ?

*ಶ್ರೀ ಎ. ಜಿ. ರಾಮಚಂದ್ರರಾವ್.—ಮಲ್ಲಪ್ಪ ಸಮಿತಿಯ ವರದಿಯ ದೃಷ್ಟಿಯಿಂದ ಹೈಕೋರ್ಟಿನವರು ಯಾವರೀತಿ ಹೇಳುತ್ತಾರೆಂದು ಕೇಳಿದ್ದೇವೆ. ಅವರು ಪ್ರತಿ ತಾಲ್ಲೂಕಿಗೂ ಹೋಗಿ ಪರಿಶೀಲಿಸಿ ಒಂದೊಂದಾಗಿ ವರದಿಯನ್ನು ಕಳುಹಿಸುತ್ತಿದ್ದಾರೆ.

ಶ್ರೀ ಬಿ. ಚಿಕ್ಕಣ್ಣ.—ಅವರ ವರದಿ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇನ್ನೂ ಪೂರ್ತಿಯಾಗಿ ಬಂದಿಲ್ಲ. ಕೆಲವುಭಾಗ ಬಂದಿದೆ.

ಶ್ರೀ ಬಿ. ಚಿಕ್ಕಣ್ಣ.—ಅರಸೀಕೆರೆ ತಾಲ್ಲೂಕಿನ ಜನರಿಂದ ಅಲ್ಲಿಗೆ ಕೋರ್ಟು ಅವಶ್ಯಕವಾಗಿ ಬೇಕೆಂದು ಮನವಿ ಬಂದಿರುವುದಲ್ಲದೆ ತಮ್ಮನ್ನೂ ಭೇಟಿಮಾಡಿ ಅವರು ಕೇಳಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿದೆ, ನಾನೂ ಒಂದು ಕಾಲದಲ್ಲಿ ಇದಕ್ಕಾಗಿ ಪ್ರಯತ್ನ ಮಾಡಿದ್ದೆ, ಅದ ನಿಮಗೂ ಗೊತ್ತಿದೆ.

ಶ್ರೀ ಬಿ. ಚಿಕ್ಕಣ್ಣ.—ಬಹಳ ಅವಶ್ಯಕವಾಗಿರುವುದರಿಂದ ಅಲ್ಲಿಗೆ ಕೋರ್ಟನ್ನು ಕೊಡಲು ಮನಸ್ಸು ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೈಕೋರ್ಟಿನ ವಕದಿಯನ್ನು ನೋಡಿ ಪರಿಶೀಲನೆ ಮಾಡುತ್ತೇವೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಮಲ್ಲಪ್ಪ ಸಮಿತಿ ವರದಿಯಲ್ಲಿ ಏನು ಹೇಳಿದ್ದಾರೆ ?

Mr. SPEAKER.—It is not allowed. The question is not about the Mallappa's Committee's Report. The question is whether that Committee has discussed this matter.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಹೆಗ್ಗಡದೇವನ ಕೋಟೆಗೆ ಕೋರ್ಟನ್ನು ಕೊಡಬೇಕೆಂದು ಶಿಫಾರಸಿದೆಯೇ ?

Mr. SPEAKER.—That question is not allowed.

ಶ್ರೀ ಕೆ. ಲಕ್ಕಪ್ಪ.—ಸಮಿತಿಯವರು ಅರಸೀಕೆರೆಗಲ್ಲದೆ ಬೇರೆ ಕಡೆಗಳಿಗೂ ಕೊಡಬೇಕೆಂದು ಶಿಫಾರಸು ಮಾಡಿದ್ದಾರೆಯೇ ?

Mr. SPEAKER.—That does not arise.

ಶ್ರೀ ಕೆ. ಪಂಚಾಕ್ಷರಯ್ಯ.—ನ್ಯಾಯ ಶಾಖೆಯ ಮಂತ್ರಿಗಳು ಮೇ ತಿಂಗಳಿನಲ್ಲಿ ಹಾಸನ ಡಿಸ್ಟ್ರಿಕ್ಟಿನಲ್ಲಿ ಟೂರ್ ಮಾಡಿದಾಗ ಅರಸೀಕೆರೆಗೆ ಜಾಗ್ರತೆ ಒಂದು ಕೋರ್ಟು ಮಂಜೂರಾಗುತ್ತದೆಂದು ಹೇಳಿದ್ದು ಜ್ಞಾಪಕದಲ್ಲಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಾಗೆ ಜ್ಞಾಪಕದಲ್ಲಿಲ್ಲ.

ಶ್ರೀ ಕೆ. ಪಂಚಾಕ್ಷರಯ್ಯ.—ಅಲ್ಲಿ ನಡೆದ ಒಂದು ಸಮಾರಂಭದಲ್ಲಿ ಮಾತನಾಡುವಾಗ ಅರಸೀಕೆರೆಗೆ ಒಂದು ಕೋರ್ಟು ಜಾಗ್ರತೆ ಬರುತ್ತದೆಂದು ಹೇಳಿದರು.

Sri A. G. RAMACHANDRA RAO.—I have not stated like that. I am sorry. ತಾವು ತಪ್ಪು ತಿಳಿದುಕೊಂಡಿದ್ದೀರಿ.

ಶ್ರೀ ಕೆ. ಪಂಚಾಕ್ಷರಯ್ಯ.—ಕೊಮಾರನಹಳ್ಳಿಯಲ್ಲಿ ನಡೆದ ಒಂದು ಸಮಾರಂಭದಲ್ಲಿ ಜಾಗ್ರತೆ ಜೂಕ್-ಬುಲ್ಲೆ ಹೊತ್ತಿಗೆ ಬರುತ್ತದೆಂದು ಹೇಳಿದಿರಿ; ಅದಿರಲಿ. ಈಗ ಅರಸೀಕೆರೆಗೆ ಒಂದು ಕೋರ್ಟು ಕೊಡುವುದರ ಅವಶ್ಯಕತೆಯಿದೆ ಎಂಬುದನ್ನು ಮನಗಂಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಲ್ಲಿಂದ ಒತ್ತಾಯ ಬರುತ್ತಿರುವುದನ್ನು ಹೇಳಿದ್ದೇನೆ.

ಶ್ರೀ ಕೆ. ಪಂಚಾಕ್ಷರಯ್ಯ.—ಮಲ್ಲಪ್ಪನವರ ಕಮಿಟಿಯ ರಿಪೋರ್ಟಿನಮೇಲೆ ಮತ್ತು ಅಲ್ಲಿನವರಿಂದ ಬಂದ ಮನವಿಗಳಮೇಲೆ ಸರ್ಕಾರದವರೇನಾದರೂ ಒಂದು ಅಭಿಪ್ರಾಯಕ್ಕೆ ಬಂದಿದ್ದಾರೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಪ್ಪರ ಮೇಲೆಯೇ ಒಂದು ನಿರ್ಧಾರಕ್ಕೆ ಬರುವುದಕ್ಕಾಗುವುದಿಲ್ಲ. ಹೈಕೋರ್ಟಿನ ರಿಪೋರ್ಟ್ ಬರಬೇಕು ಮತ್ತು ಕ್ಯಾಬಿನೆಟ್ ತೀರ್ಮಾನ ಕೊಡಬೇಕು.

Sri A. V. NARASIMHA REDDY.—Did Sri Mallappa's Committee submit a report to Government ?

Sri A. G. RAMACHANDRA RAO.—The report was submitted some months ago and it has been circulated to all the Hon'ble Members.

Sri A. V. NARASIMHA REDDY.—Will the Government be pleased to place a copy of the Report on the Table of the House, Sir ?

Mr. SPEAKER.—That has been circulated to all the Hon'ble Members.

Sri A. G. RAMACHANDRA RAO.—I shall place a copy of the report on the Table of the House if you want.

Ayurvedic and Unani College.

Q.—129. Sri R. MUNISWAMIAH (Bangalore North-Scheduled Castes).—Will the Government be pleased to state :—

(*a*) the amount that has been granted by the Central Government towards encouraging Ayurvedic Medicine and Unani Medicine during 1954-55 ;

(*b*) the facilities provided in Ayurvedic and Unani Medical College, Mysore, for teaching the subjects ;

(*c*) whether accommodation is adequate ;

(*d*) what are the improvements that the College require ;

(*e*) whether the Principal has suggested any improvement and extension of buildings ;